ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.—ಸೆಕ್ರೆಟರಿಗಳು ಹಾಗೂ ಡೆಪ್ಯುಟೀ ಸೆಕ್ರೆಟರಿಗಳು ಒಟ್ಟು 48 ಜನ ಎಂದು ಹೇಳಿರುವುದರಲ್ಲಿ ಎಷ್ಟು ಜನ ಷೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಟ್ರೈಬ್ಸ್ ಪಂಗಡಕ್ಕೆ ಸೇರಿದವರು ಇದ್ದಾರೆ ? ಮತ್ತು ಕಡಿಮೆ ಸಂಖ್ಯೆಯಲ್ಲಿ ಇಂತಹ ಹುದ್ದೆಗಳಿಗೆ ನೇಮಿಸದೇ ಇರಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಒಟ್ಟು ಪಟ್ಟಿಯನ್ನು ಕೇಳಿದರು. ಅದರಂತೆ ಕೊಡಲಾಗಿದೆ. ಕೆಲವು ಕಡೆ ಷೆಡ್ಯೂಲ್ಡ್ ಕ್ಯಾಸ್ಟ್ ಪಂಗಡದವರೂ ಇದ್ದಾರೆ. ಉದಾಹರಣೆ ಹೇಳಬೇಕಾದರೆ ಶ್ರೀಮಾನ್ ಭರಣಯ್ಯ ಎನ್ನುವರು ಬಹಳ ದಿವಸಗಳ ಕಾಲ ಪಂಚಾಯತಿ ರಾಜ್ಯ ಹಾಗೂ ಸಹಕಾರ ಖಾತೆಯ ಕಾರ್ಯದರ್ಶಿಗಳಾಗಿದ್ದರು. ಇತ್ತೀಚೆಗೆ ಅವರು ಪಬ್ಲಿಕ್ ಸರ್ವಿಸ್ ಕಮಿಷನ್ ಮೆಂಬರಾಗಿ ನೇಮಕವಾದರು.

ಶ್ರೀ ಹೆಚ್. ಬಿ. ಚ್ಯಾಲನಯ್ಯ.—ಕಾರ್ಯದರ್ಶಿಗಳು ಹಾಗೂ ಉಪಕಾರ್ಯದರ್ಶಿಗಳನ್ನು ನೇಮಕ ಮಾಡುವಾಗ ಸರಕಾರದವರು ಅನುಸರಿಸುತ್ತಿರುವ ನೀತಿಯೇನು ?

ಶ್ರೀ ವೀರೇಂದ್ರ ಪಾಟೀಲ್.—ರೆಕ್ರೂಟುಮೆಂಟು ರೂಲ್ಸ್ ಪ್ರಕಾರ ಕಾರ್ಯದರ್ಶಿಗಳನ್ನು ಹಾಗೂ ಉಪಕಾರ್ಯದರ್ಶಿಗಳನ್ನು ನೇಮಕ ಮಾಡಲಾಗುತ್ತದೆ.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ನಾಲ್ಕು ಜನ ಮೈಸೂರು ದೇಶದ ಹೊರಗಿನವರು ಎಂದರೆ ಇವರು ಹೈದರಾಬಾದು ಕರ್ನಾಟಕ ಭಾಗಕ್ಕೆ ಸೇರಿದವರೂ ಅಲ್ಲ ಮತ್ತು ಬಾಂಬೆ ಕರ್ನಾಟಕಕ್ಕೆ ಸೇರಿದವರೂ ಅಲ್ಲ ಎಂದು ಅರ್ಥವೆ ? ಮತ್ತು ಹೊಸಮೈಸೂರು ಪ್ರದೇಶದಲ್ಲಿ 20 ಜನ ಎಂದು ಹೇಳಿದ್ದೀರಿ. ಇದರಲ್ಲಿ ಹೈದರಾಬಾದು ಭಾಗಕ್ಕೆ ಸೇರಿದವರು ಎಷ್ಟು ? ಮತ್ತು ಬೊಂಬಾಯಿ ಭಾಗಕ್ಕೆ ಸೇರಿದವರು ಎಷ್ಟು ?

ಶ್ರೀ ವೀರೇಂದ್ರ ಪಾಟೀಲ್.—20 ಜನರಲ್ಲಿ ಇಬ್ಬರು ಹೊರಗಡೆಗೆ ವರ್ಗವಾಗಿ ಹೋಗಿದ್ದಾರೆ. ಇನ್ನುಳಿದ 18 ಜನರಲ್ಲಿ 13 ಜನ ಹಳೇ ಮೈಸೂರು ಭಾಗಕ್ಕೆ ಸೇರಿದವರು, ಮೂರು ಜನ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದವರು ಒಬ್ಬರು, ಬಾಂಬೆ ಕರ್ನಾಟಕಕ್ಕೆ ಸೇರಿದವರು ಮತ್ತು ಒಬ್ಬರು ಹೊರಗಿನವರು ಇದ್ದಾರೆ.

ಶ್ರೀ ಎಸ್. ಎಸ್. ಅರಕೇರಿ.—ಐ. ಎ. ಎಸ್. ಕೇಡರಿಗೆ ಹೊರಗಿನಿಂದ ಬರುತ್ತಾರೆಂದು ಹೇಳಿದಿರಿ. ಮೈಸೂರು ರಾಜ್ಯದವರ ಕೋಟಾ ಈ ಐ. ಎ. ಎಸ್. ಕೇಡರಿನಲ್ಲಿ ಎಷ್ಟು ಇತ್ತು ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿರುವ ಪ್ರಶ್ನೆಯಂತೆ ಒಟ್ಟು ವಿವರಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಪ್ರತ್ಯೇಕವಾದ ಒಂದು ಪ್ರಶ್ನೆ ಕೇಳಿದರೆ ಆಗ ನಮ್ಮ ರಾಜ್ಯದವರು ಕೋಟಾ ಎಷ್ಟು ಎನ್ನುವ ವಿವರಗಳನೆಲ್ಲಾ ಕೊಡಬಹುದು.

ಶ್ರೀ ಬಿ. ಪಿ. ಗಂಗಾಧರ್.—ಕಾರ್ಯದರ್ಶಿಗಳು ಹಾಗೂ ಉಪ ಕಾರ್ಯದರ್ಶಿಗಳನ್ನು ನೇಮಕ ಮಾಡುವಾಗ ಅವರಲ್ಲಿರುವ ಕಾರ್ಯದಕ್ಷತೆ, ಸರಕಾರದವರಲ್ಲಿ ಇರುವ ನಂಬಿಕೆ ಇತ್ಯಾದಿ ಗಳನೆಲ್ಲಾ ಗಮನಿಸಿ ನೋಡುತ್ತಾರೆಯೇ ? ಇಲ್ಲವೆ ಅಯಾ ಭಾಗಕ್ಕೆ ಸೇರಿದವರು ಎಂದು ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಸರಕಾರ ಆ ರೀತಿಯಿಂದ ಪ್ರತಿಯೊಂದು ಕಡೆ ಸೆಕ್ರೆಟರಿಗಳನ್ನು ನೇಮಿಸುವಾಗ ಹಳೇ ಮೈಸೂರಿನವರು ಅಥವಾ ಹೊಸ ಮೈಸೂರಿನವರು ಎಂದು ನೋಡುವುದಕ್ಕಾಗುವುದಿಲ್ಲ. ಇವರ ಸರ್ವಿಸ್ ಏನು, ಎಕ್ಸ್‌ಪೀರಿಯನ್ಸ್ ಏನು ಇವರ ಕ್ವಾಲಿಫಿಕೇಷನ್‌ಗಳೇನು ಇವನೆಲ್ಲಾ ನೋಡಿಕೊಂಡು ಅನಂತರ ನೇಮಕಗಳನ್ನು ಮಾಡುತ್ತಾರೆ. ಮೊದಲಿಗೆ ಸೆಕ್ಷನ್ ಆಫೀಸರಾಗಿ ಕೆಲಸ ಮಾಡಿರುವವರು ಅನಂತರ ಅಂಡರ್ ಸೆಕ್ರೆಟರಿಗಳಾಗಿ ನೇಮಕವಾಗುತ್ತಾರೆ, ಅಂಡರ್ ಸೆಕ್ರೆಟರಿಗಳಾಗಿರುವರು ಮುಂದೆ ಡೆಪ್ಯೂಟಿ ಸೆಕ್ರೆಟರಿಗಳಾಗಿ ಪ್ರಮೋಷನ್‌ಮೇಲೆ ನೇಮಕವಾಗುತ್ತಾರೆ. ಅನಂತರ ಡೆಪ್ಯುಟಿ ಸೆಕ್ರೆಟರಿಗಳಾಗಿರುವವರು ಸೆಕ್ರೆಟರಿಗಳಾಗಿ ನೇಮಕವಾಗುತ್ತಾರೆ.

Tumkur Taluk Agricultural Produce Marketing Society

224. Sri GANGA BOVI (Gulur).—

Will the Minister for Development be pleased to state.—

(*a*) the share capital of the Tumkur Taluk Agricultural Produce Co-operative Marketing Society, the amount of grant given by the Government and the profit earned by it ;

(*b*) whether any audit of accounts of the said society was conducted, if so, whether satisfactory replies have been furnished to the audit objections and to the audit note for recovery of the amount, if any ;

(*c*) the reasons for tendering resignation by the Secretary of Society previously ;

(*d*) whether it has come to the notice of Government that the society is appointing only their persons and while distributing foodgrains 5 Kg. is given less for each bag ?

Sri B. L. GOUDA (Deputy Minister for Co-operation).—

(*a*) The Share capital of the Society is Rs. 1,15,165, share capital granted by Government is Rs. 1,02,000. The profit for 1967-68 is Rs. 18,766-31.

(*b*) Yes. Out of the 72 points made by the Auditor, replies of the society to 58 items are found convincing. 4 points are partly rectified. In respect of the others action is to be taken.

(*c*) The Inspector of Co-operative Societies previousy working as Secretary did not resign from the post of the Secretary but from the Inspector's post on his own volition to look after his hereditary properties.

(*d*) No.

ಶ್ರೀ ಗಂಗಾಬೋವಿ.—ತುಮಕೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಂಘದ ಸಹಕಾರ ಸಂಘದಲ್ಲಿ ಶೇರುಬಂಡವಾಳವೆಷ್ಟು? ಮತ್ತು ಅದರಲ್ಲಿ ಬಂದಿರತಕ್ಕ ಲಾಭವೆಷ್ಟು ತಿಳಿಸುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಆ ಸಂಘದ ಶೇರು ಬಂಡವಾಳ 1,15,165, ರೂಪಾಯಿಗಳು ಲಾಭ ಬಂದಿರತಕ್ಕದ್ದು 1967-68 ರಲ್ಲಿ 18,766-31 ರೂಪಾಯಿಗಳು ; 1966-67 ರಲ್ಲಿ 35,000 ರೂಪಾಯಿಗಳು ಲಾಭ ಬಂದಿವೆ.

ಶ್ರೀ ಗಂಗಾಬೋವಿ.—ಆ ಸೊಸೈಟಿಯಲ್ಲಿ ಸಹಕಾರ ಸಂಘದ ಸೆಕ್ರೆಟರಿಯವರು ರಾಜೀನಾಮೆ ಕೊಟ್ಟಿರತಕ್ಕ ಕಾರಣ ಏನು ? ಎಷ್ಟು ದಿವಸ ಆಯಿತು ? ಎಷ್ಟು ಹಣ ದುರುಪಯೋಗಪಡಿಸಿದ್ದಾರೆ?

ಶ್ರೀ ಬಿ. ಎಲ್. ಗೌಡ.—ಅವರು ಅಲ್ಲಿಯ ಖಾಯಂ ನೌಕರರಲ್ಲ. ಅವರನ್ನು ಕೋ-ಆಪ ರೇಟಿವ್ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಂಡಿತ್ತು. ಅವರು ಬೇರೆ ಕಾರಣದಿಂದ ಸ್ವಂತ ಕೆಲಸ ಇದೆ ಎಂದು ರಾಜೀನಾಮೆ ಕೊಟ್ಟಿದ್ದಾರೆ. ಮತ್ತು ಅವರಿಂದ ಬರಬೇಕಾದ ಬಾಕಿ 8,000 ರೂಪಾಯಿಗಳನ್ನು ಸಹ ವಾಪಸ್ಸು ಕೊಟ್ಟಿದ್ದಾರೆ.

ಶ್ರೀ ವಿ. ಎಲ್. ಶಿವಪ್ಪ.—ಸ್ವಾಮಿ, ರೆಕ್ಕ ತನಿಖಾಧಿಕಾರಿಗಳು ನೂಚಿಸಿದ್ದ 72 ಆಕ್ಷೇಪಣೆಗಳ ಪೈಕಿ ಸಂಘದವರು 58 ಆಕ್ಷೇಪಣೆಗಳಿಗೆ ಉತ್ತರವನ್ನು ನೀಡಿದ್ದು, ಇನ್ನು 4 ಆಕ್ಷೇಪಣೆಗಳನ್ನು ಭಾಗಶಃ ಸರಿಪಡಿಸಲಾಗಿದೆ ಎಂದು ಹೇಳಿದ್ದೀರಿ. ಭಾಗಶಃ ಅನ್ನುವುದರ ಬಗ್ಗೆ ಆಕ್ಷೇಪಣೆಗಳು ಯಾವುವು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರಿಗೆ ಡೀಜೇಲ್ಸ್ ಬೇಕಾದರೆ ಜೇಬಲ್ ಮೇಲೆ ಇಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಭಾಗಶಃ ಅಂದರೆ ಕೆಲವು ಹಣ ವಸೂಲಾಗಬೇಕಾಗಿದೆ, ಕೆಲವು ಹಣವಸೂಲಾಗಿದೆ. ಭಾಗಶಃ ಕ್ರಮ ತೆಗೆದುಕೊಂಡಿರುವುದು ಎಂದರೆ ಇನ್ನೂ ಇವುಗಳಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರುವುದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸ್ವಾಮಿ, ತಾವು 1967-68 ರಲ್ಲಿ ಆ ಸೊಸೈಟಿಯಲ್ಲಿ ಗಳಿಸಿದ ಲಾಭ 8,766.31 ರೂಪಾಯಿಗಳು ಎಂದು ಹೇಳಿದಿರಿ, ಹಾಗಲ್ಲ ಉತ್ತರದಲ್ಲಿ 18766-31 ಎಂದು ಇದೆ. ಹಾಗಾದರೆ ಈವಾಗ ನೀವು ಹೇಳಿದ್ದು ಸರಿಯೋ ಅಥವಾ ಉತ್ತರದಲ್ಲಿ ಕೊಟ್ಟಿರುವುದು ಸರಿಯೋ ?

ಶ್ರೀ ಬಿ. ಎಲ್. ಗೌಡ.—ನಾನು ಹಾಗೆ ಹೇಳಿಲ್ಲ. ನಾನು 18,766-31 ರೂಪಾಯಿಗಳು 1967-68 ರಲ್ಲಿ ಗಳಿಸಿದ ಲಾಭ ಎಂದು ಹೇಳಿದ್ದು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅನೇಕ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಂಘದ ಸೊಸೈಟಿಗಳಲ್ಲಿ ಸರ್ಕಾರದವರು ಲಕ್ಷಾಂತರ ರೂಪಾಯಿ ಬಂಡವಾಳ ಹಾಕಿದ್ದಾರೆ. ಅದರಿಂದ ಎಷ್ಟು ಬಡ್ಡಿ ಬಂದಿದೆ ? 10-15 ಸಾವಿರ ರೂಪಾಯಿ ಬಂಡವಾಳ ಹಾಕಿರತಕ್ಕಂಥ ಖಾಸಗಿ ಸೊಸೈಟಿಗಳು ಲಾಭ ಬಂದಿರುವುದರಿಂದ ಆ ಬಡ್ಡಿಯನ್ನು ಹಂಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಎಲ್. ಗೌಡ.—ಅದು ಏನೂ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ತುಮಕೂರಿನಲ್ಲಿರುವ ಸೊಸೈಟಿಗಳಲ್ಲಿ ಎಷ್ಟು ಪರ್ಸೆಂಟು ಲಾಭ ಬಂದಿದೆ ತಿಳಿಸುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಆ ವಿವರ ನನ್ನಲ್ಲಿ ಇಲ್ಲ.

Extent of Land coming under Irrigation after Construction of Hidkal Dam

(236) Sri K. P. NADAGOWDA (Mudhol).—

Will the Chief Minister be pleased to state :—

(*a*) the number of acres of land, the Ghataprabha Project, after the construction of Hidkal dam can irrigate ;

(*b*) the total area that the project would command on the left side of the river for irrigation ;

(*c*) whether it is possible to irrigate lands on the right side of the river ;

(*d*) if so, the extent of such area ?

Sri VEERENDRA PATIL (Chief Minister).—

(*a*) 5·98 lakh acres.

(*b*) Irrigable area of 2·93 lakh acres.

(*c*) Yes.

(*d*) 3·00 lakh acres.